

ಭಾಗಮಂಡಲದಲ್ಲಿ ನಿರ್ಮಾಣಗೊಳ್ಳುತ್ತಿರುವ ಹನಿಪಾರ್ಕ್

ಮತ್ತು ತೋಟಗಾರಿಕೆ ಇಲಾಖೆಯ ಸುಪರ್ದಿಗೆ ವರ್ಗಾಯಿಸಲಾಯಿತು. ಇಲಾಖೆಯ ಸಿಬ್ಬಂದಿ, ಸ್ಥಿರ ಹಾಗೂ ಚರ ಆಸ್ತಿಗಳನ್ನು ಕೃಷಿ ಮತ್ತು ತೋಟಗಾರಿಕಾ ಇಲಾಖೆಗೆ ವರ್ಗಾಯಿಸಲಾಗಿದ್ದು ಸರಕಾರಿ ಜೇನು ಕೃಷಿ ತರಬೇತಿ ಕೇಂದ್ರವು ಈಗ ತೋಟಗಾರಿಕೆ ಇಲಾಖೆಯ ಸುಪರ್ದಿಯಲ್ಲಿದೆ. ಈಗ ಸಿದ್ಧಗೊಳ್ಳುತ್ತಿರುವ ಹನಿಪಾರ್ಕ್‌ನ ಅಭಿವೃದ್ಧಿಗಾಗಿ ಗೋಣಿಕೊಪ್ಪದ ಕೃಷಿವಿಜ್ಞಾನ ಕೇಂದ್ರದ ಡಾ.ಕೆಂಚಾರೆಡ್ಡಿ ನೇತೃತ್ವದಲ್ಲಿ ಜೇನುನೊಣಗಳ ಕುರಿತು ಸಂಶೋಧನೆ ನಡೆಸಲಾಗಿದೆ. ತರಬೇತಿ ಕೇಂದ್ರದಲ್ಲಿ ಸುಮಾರು 33 ಲಕ್ಷ ರೂಪಾಯಿ ವೆಚ್ಚದಲ್ಲಿ ಮ್ಯೂಸಿಯಂ ನಿರ್ಮಿಸಲು ಅಗತ್ಯ ಪರಿಕರಗಳನ್ನು ಸಂಗ್ರಹಿಸಲಾಗಿದೆ.

ಭಾಗಮಂಡಲದಲ್ಲಿ 6.37 ಎಕ್ರೆ ಸ್ಥಳದಲ್ಲಿ ಸ್ಥಾಪಿತವಾಗಿರುವ ಈ ತರಬೇತಿ ಕೇಂದ್ರದಲ್ಲಿ ಕೇವಲ ಹನಿಪಾರ್ಕ್ ಮಾತ್ರವಲ್ಲ, ಸುಸಜ್ಜಿತ ಬಾಲಕರ ಮತ್ತು ಬಾಲಕಿಯರ ವಸತಿಗೃಹಗಳು, ಭೇಟಿ ಕೊಡುವವರಿಗೆ ಅತಿಥಿಗೃಹ, ಮೀಟಿಂಗ್ ಹಾಲ್, ತರಗತಿ ಕೊಠಡಿಗಳೂ ಇವೆ. ತರಬೇತಿ ಕೇಂದ್ರ ಆರಂಭವಾದಲ್ಲಿಂದ ಇದುವರೆಗೆ 3950 ಮಂದಿ ಜೇನುಕೃಷಿ ತರಬೇತಿಯಲ್ಲಿ ಮೂರು ತಿಂಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್ ಪೂರೈಸಿದ್ದಾರೆ. ಇದಲ್ಲದೇ ಒಂದು ವಾರದ, ಒಂದು ತಿಂಗಳ ತರಬೇತಿಯನ್ನು ರಾಜ್ಯದ ಹಲವರು ಹೊಂದಿದ್ದಾರೆ. ಬರೀ ತರಬೇತಿ ಪಡೆದುಕೊಳ್ಳುವವರಿಗೆ ಮಾತ್ರವಲ್ಲ. ಸಾರ್ವಜನಿಕರಿಗೆ, ಪ್ರವಾಸಿಗರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಅಧ್ಯಯನಾಸಕ್ತರಿಗೆ ಈ ಕೇಂದ್ರವು ಆಕರ್ಷಣೆಯ ತಾಣವಾಗಿದೆ. ಜೇನು ಕೃಷಿಗೆ ಸಂಬಂಧಿಸಿ ಎಲ್ಲ ಮಾಹಿತಿಗಳನ್ನೂ ನೀಡುತ್ತಿದೆ. ದೇಶ-ವಿದೇಶಗಳಿಂದ ಬಂದು ಈ ಕೇಂದ್ರದಲ್ಲಿ ಅಧ್ಯಯನ ನಡೆಸಿ ಪಿಹೆಚ್‌ಡಿ ಪಡೆದವರೂ ಇದ್ದಾರೆ ಎಂಬುದು ಈ ಕೇಂದ್ರದ ಹೆಗ್ಗಳಿಕೆ.

ಈ ಮಧ್ಯೆ ತರಬೇತಿ ಕೇಂದ್ರದಲ್ಲಿ 2006ರಿಂದ ಜೇನು ಕೃಷಿ ತರಬೇತಿ ಸ್ಥಗಿತಗೊಂಡಿತ್ತು. ಆದರೆ ಕಳೆದ ವರ್ಷದಿಂದ ಮತ್ತೆ ತರಬೇತಿ ಆರಂಭವಾಗಿದ್ದು ಮತ್ತೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಆಸಕ್ತರು ತರಬೇತಿ ಪಡೆಯುತ್ತಿದ್ದಾರೆ. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಧೀನದಲ್ಲಿದ್ದ ತರಬೇತಿ ಕೇಂದ್ರವು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ವರ್ಗಾವಣೆಗೊಂಡಿದ್ದರೂ ಸಿಬ್ಬಂದಿಗಳ ಕೊರತೆ ಕಾಡುತ್ತಿದೆ. ಹಾಲಿ ಇರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ನಿವೃತ್ತಿಯ ಅಂಚಿನಲ್ಲಿದ್ದು ತರಬೇತಿ ಹೊಂದಿದವರನ್ನು ಇಲಾಖೆ ನೇಮಕ ಮಾಡಿಕೊಂಡರೆ ಮಾತ್ರ ತರಬೇತಿ ಕೇಂದ್ರ ಹಾಗೂ ಹನಿಪಾರ್ಕ್ ಅಭಿವೃದ್ಧಿ ಪಥದತ್ತ ಸಾಗಲಿದೆ. ■

ಭಾಗಮಂಡಲದಲ್ಲಿ ಹನಿಪಾರ್ಕ್ ಬಳಿ ಉಪನ್ಯಾಸ ಮಂದಿರ.




ಜಾಹೀರಾತು

# ಸುಂದರ ಮೂಗಿಗೆ ವರದಾನ - ರೈನೋಪ್ಲಾಸ್ಟಿ



ಮೂಗಿನ ಆಕಾರದ ಕುರಿತ ಎಲ್ಲಾ ಸಮಸ್ಯೆಗಳಿಗೆ ರೈನೋಪ್ಲಾಸ್ಟಿಯು ಉತ್ತಮವಾದ ಪರಿಹಾರವಾಗಿದೆ. ಈ ಸೌಲಭ್ಯದಿಂದಾಗಿ ಜನ್ಮತಃ ಯಾವ ರೀತಿಯ ಮೂಗಿನ ವೈಕಲ್ಯವಿದ್ದರೂ ಅದನ್ನು ಹೋಗಲಾಡಿಸಿ ಪರಿಪೂರ್ಣ ಮತ್ತು ಅಂದವಾದ ಮೂಗನ್ನು ಪಡೆಯಬಹುದು. ಅದಾಗಿ ರೈನೋಪ್ಲಾಸ್ಟಿ ಸರ್ಜರಿಯ ಮೂಲಕ ನಿಮ್ಮ ಮೂಗನ್ನು ನೈಸರ್ಗಿಕವಾಗಿ ಕಾಣುವಂತೆ ಮತ್ತು ನಿಮ್ಮ ಮುಖದ ರಚನೆಗೆ ಹೊಂದುವಂತೆ ರೂಪಿಸಲಾಗುವುದು. ಅಲ್ಲದೆ ಹುಟ್ಟಿನಿಂದ ಬರುವ ಮೂಗಿನ ರಚನೆಯಲ್ಲಿನ ದೋಷಗಳು, ಅದರಿಂದ ಉಂಟಾಗುವ ಉಸಿರಾಟದ ಸಮಸ್ಯೆ ಅಥವಾ ಅಪಘಾತದಿಂದಾಗಿ ಮೂಗು ಹಾನಿಗೊಳಗಾಗಿದ್ದಲ್ಲಿ ಮುಂತಾದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಮುಖದ ಅಂದವನ್ನು ಮತ್ತಷ್ಟು ಹೆಚ್ಚಿಸಲು ಅಗತ್ಯವಾದ ಇನ್ನಿತರ ಸರ್ಜರಿ ಪ್ರಕಾರಗಳಾದ ಕೆನ್ನೆಗುಳಿ, ಗಲ್ಲದ ಸರ್ಜರಿ, ಕೆನ್ನೆಯ ಆಕಾರದ ಅಂದವನ್ನು ಮತ್ತಷ್ಟು ಹೆಚ್ಚಿಸುವಿಕೆ ಮತ್ತು ತುಟಿಯ ಆಕಾರವನ್ನು ಸರಿಪಡಿಸುವುದು ಮುಂತಾದ ಹಲವು ಸರ್ಜರಿಗಳನ್ನು ರೈನೋಪ್ಲಾಸ್ಟಿ ಸರ್ಜರಿ ಜೊತೆಯಲ್ಲೇ ನಡೆಸಬಹುದಾಗಿದೆ.

ಆದರೆ ಕೆಲವರಲ್ಲಿ ಸರ್ಜರಿಗೆ ಒಳಗಾಗುವ ಮುನ್ನ ಹಲವು ಬಗೆಯ ಆತಂಕ ಮನೆ ಮಾಡಿರುತ್ತದೆ. ಉದಾಹರಣೆಗೆ : ಮೂಗು ಇರುವುದಕ್ಕಿಂತ ಕೆಟ್ಟುಹೋದರೆ, ಮುಖದ ರಚನೆಗೆ ಸರಿಯಾಗಿ ಹೊಂದಾಣಿಕೆ ಆಗದಿದ್ದರೆ ಅಥವಾ ಮೂಗಿನ ಬದಲಾದ ಸ್ವರೂಪ ಅಥವಾ ಶಾಶ್ವತವಾಗಿರುವುದೋ, ಇಲ್ಲವೋ ಎಂಬ ಆತಂಕ ಮನೆ ಮಾಡಿರುತ್ತದೆ. ಆದರೆ ನೀವು ಒಬ್ಬ ನುರಿತ ಸೌಂದರ್ಯವರ್ಧಕ ವೈದ್ಯರಲ್ಲಿ ಇಂತಹ ಚಿಕಿತ್ಸೆಯನ್ನು ಹೊಂದಿದರೆ ಇದು ನಿಮ್ಮ ಬದುಕಿಗೆ ವರದಾನವಾಗಿ ಪರಿಣಮಿಸುತ್ತದೆ.

ರೈನೋಪ್ಲಾಸ್ಟಿ ಒಂದು ದಿನದ ಸರ್ಜರಿ ಪ್ರಕ್ರಿಯೆ ಆಗಿದ್ದು, ಸಾಧಾರಣತಃ ಮೂರು ಅಥವಾ ನಾಲ್ಕು ದಿವಸದ ನಂತರ ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳಬಹುದು. ಸರ್ಜರಿಯ ಅನಂತರ ಮೊದಲಿಗೆ ಸ್ವಲ್ಪಮಟ್ಟದ ಊತವಿದ್ದು ಒಂದು ತಿಂಗಳಲ್ಲಿ ಅದು ಕಡಿಮೆಯಾಗಿ ನಿಮ್ಮ ಮೂಗು ಸುಂದರವಾಗಿ ರೂಪುಗೊಂಡಿರುತ್ತದೆ.

**ಇನ್ನಿತರೆ ಸೇವೆಗಳು :** ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಪುರುಷರ ಎದೆಯ ಸರ್ಜರಿ, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ ಮತ್ತು ಕೋರಮಂಗಲ, ಬೆಂಗಳೂರು.**

www.curlsncurves.com

8088400400 9448571216

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು